the Stores till the end of April 1969. In addition the Stores are due to Government, the difference of margin of Rs. 3 per quintal collected from bulk consumers.

(*b*) Action will be taken to settle the claims of the Stores after production of the proof of the remittance of the amount due to Government.

(*c*) and (*d*) Do not arise in view of reply to Clause (*a*).

ಶ್ರೀ ಎನ್. ಬಸವಯ್ಯ .—ಇಲ್ಲಿ ಸಂಬಂಧಪಟ್ಟವರು ತಮ್ಮ ಬಿಲ್ಲುಗಳನ್ನು ಸಂಬಂಧಪಟ್ಟ ಪುಡ್ ಅಧಿಕಾರಿಗಳಿಗೆ ಕೊಟ್ಟರು ಆದಕ್ಕೆ ಗಮನ ಕೊಡದಿದ್ದುದರಿಂದ ಅವರಿಗೆ ಬಹಳವಾಗಿ ನಷ್ಟವಾಗಿರುವುದು ನಿಜವೇ ? ಅದರ ಬಗ್ಗೆ ತಮ್ಮ ಅಭಿಪ್ರಾಯವೇನು ?

ಶ್ರೀಮತಿ ಇ. ಇ. ವಾಜ್ .—ಈ ಕಂಟ್ರೋಲ್ ಪ್ರಾರಂಭವಾದಂದಿನಿಂದ ೧೯೬೯ರ ವರೆಗೆ ಅವರಿಗೆ ಒಂದು ಕೋಟಿ ಮೂರು ಲಕ್ಷದ ಚಿಲ್ಲರೆ ಸಾಮಾನುಗಳನ್ನು ಒದಗಿಸಿದ್ದಾರೆ. ಸರ್ಕಾರಕ್ಕೆ ಇವರು ಕೊಟ್ಟದ್ದು ೭೧ ಲಕ್ಷ ಚಿಲ್ಲರೆ ಸರ್ಕಾರಕ್ಕೆ ಬರಬೇಕಾದ್ದು ಇನ್ನು ಬ್ಯಾಲೆನ್ಸ್ ೫,೯೨,೯೦೫ ಸೊಸೈಟಿಯವರ ಕ್ಲೈಮ್ ರೂಪಾಯಿ ೨,೯೨,೦೨೩.೧೧ ಇವರು ಆಡಿಸ್ಟ್ ಮಾಡಿದರೂ ಸರ್ಕಾರಕ್ಕೆ ಇನ್ನೂ ಹಣ ಬರಬೇಕಾಗುತ್ತದೆ.

ಶ್ರೀ ಬೈರಪ್ಪಾಜಿ .—ಈಗ ಸರ್ಕಾರಕ್ಕೆ ಬರಬೇಕಾದಂತಹ ಹಣ ಬರುವುದಕ್ಕೆ ಸಾಧ್ಯವಿಲ್ಲವೆಂದು ನನಗೆ ವದಂತಿ ಬಂದಿದೆ. ಕಾರಣ ಅಲ್ಲಿ ಮೂರು ನಾಲ್ಕು ಲಕ್ಷ ರೂಪಾಯಿ ದುರುಪಯೋಗವಾಗಿದೆ ಈಗ ತಮಗೆ ಬಂದಿರತಕ್ಕ ವರದಿ ಪ್ರಕಾರ ಅದು ಸರ್ಕಾರಕ್ಕೆ ಬರುತ್ತದೆ ಎಂದು ಗ್ಯಾರಂಟಿ ಇದೆಯೇ ?

ಶ್ರೀಮತಿ ಇ. ಇ. ವಾಜ್. —ಸರ್ಕಾರಕ್ಕೆ ಬರಬೇಕಾದ ಹಣ ಬರಲೇ ಬೇಕು ಅದನ್ನು ಎಷ್ಟುಮಟ್ಟಿಗೆ ವಸೂಲು ಮಾಡಬೇಕು ಮತ್ತು ಎಷ್ಟು ವಜಾ ಮಾಡಬೇಕೆಂಬುದನ್ನು ಪರಿಶೀಲನೆ ಮಾಡುತಿದ್ದೇವೆ.

ಶ್ರೀ ಸಿ. ಎನ್. ಪಾಟೀಲ್ .—ಎಷ್ಟೋ ಮಾರ್ಕೆಟಿಂಗ್ ಸೊಸೈಟಿಗಳಿಗೆ ಈ ಪುಡ್ ಪ್ರೊಕ್ಯೂರ್ ಮೆಂಟಿನಲ್ಲಿ ಬಾಡಿಗೆ ಹಣ ಸಲ್ಲಬೇಕಾದ್ದು ಸಲ್ಲಲಿಲ್ಲ ಅದನ್ನು ಎಷ್ಟು ಕಾಲಾವಧಿಯಲ್ಲಿ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಿ ?

ಶ್ರೀಮತಿ ಇ. ಇ. ವಾಜ್.—ಇದಷ್ಟು ಜಾಗ್ರತೆ ಇದನ್ನು ಕೊಡುವುದಕ್ಕೆ ಏರ್ಪಾಡು ಮಾಡಬೇಕಾಗುತ್ತದೆ. ಸರ್ಕಾರಕ್ಕೆ ಬರುವಂತದ್ದನ್ನು ವಸೂಲು ಮಾಡಬೇಕು, ಕೊಡುವಂಥದ್ದನ್ನು ಕೊಡಬೇಕಾಗುತ್ತದೆ.

1-30 P. M.

ಶ್ರೀ ಎಸ್. ಬಸವಯ್ಯ .—ಈಗಾಗಲೇ ಈ ಒಂದು ಸಂಸ್ಥೆ ಜಿಲ್ಲಾ ಬ್ಯಾಂಕಿಗೆ ಲಕ್ಷಕ್ಕಿಂತ ಹೆಚ್ಚಿಗೆ ಹಣ ಕೊಡಬೇಕಾಗಿರುವುದರಿಂದ ಅವರು ಇವರಿಗೆ ಫೈನಾನ್ಸ್ ಮಾಡುವುದನ್ನು ನಿಲ್ಲಿಸಿದ್ದಾರೆ. ಸರ್ಕಾರಕ್ಕೆ ಈಗಿಂಗಲೇ ಈ ಸಂಸ್ಥೆಯಿಂದ ೫ ಲಕ್ಷ ರೂಪಾಯಿಗಳು ಬರಬೇಕೆಂದು ಹೇಳಿದ್ದಾರೆ. ಜಿಲ್ಲಾ ಬ್ಯಾಂಕು ತಮಗೆ ಬರಬೇಕಾದ ಹಣಕ್ಕೆ ಜಿಲ್ಲಾ ಕೋರ್ಟಿಗೆ ಹೋಗುವದಾದರೆ, ಸರ್ಕಾರಕ್ಕೆ ಬರತಕ್ಕ ಹಣ ಬರುವುದಿಲ್ಲ ಅದು ಬರುವುದಕ್ಕೆ ಏನು ಏರ್ಪಾಡುಮಾಡುತ್ತೀರಾ ?

ಶ್ರೀಮತಿ. ಇ. ಇ. ವಾಜ್ .—ಏನು ಏರ್ಪಾಡು ಮಾಡಬೇಕೋ ಅದನ್ನು ಪರಿಶೀಲಿಸುತ್ತಿದ್ದೇವೆ

RELIEF TO POLITICAL SUFFERERS

411. SRI. K. SRIRAMULU .—(Gandhinagar).

Will the Minister of State for Home be pleased to state :—

(*a*) whether the monthly pension being granted to political sufferers in the State is stopped ;

(*b*) if not, the reason for not taking decision so far in respect of applications made to Government by political sufferers and granting relief to them ;

(*c*) the number of such applications under consideration of the Government ;

(*d*) the rules governing the grant of relief to the political sufferers?

SRI. R. D. KITTUR. (Minister of State for Home) .—

(*a*) No.

(*b*) The following are the main reasons .—

(i) want of jail certificate or other documents regarding imprisonment or detention on account of participation in the National Movement ;

(ii) where jail certificate is produced, in certain cases it is found that no information is available to show that the imprisonment was on account of participation in the National Movement. In such cases copy of judgment of the court that awarded the imprisonment. an if it is not available, a certificate from a responsible person is called for.

(iii) in cases where jail records are destroyed and jail certificates are not available, the applicant is required to furnish his affidavit and the affidavit of a contemporary freedom fighter regarding the former's imprisonment or detention. In such cases, it becomes necessary to verify the bonafides of the contempo ary freedom fighter and to ask the applicai t to produce ceraificate from a responsible person regarding his participation in the National Movement and the period of imprisonment or detention.

(iv) Failure to furnish the requisite documents and particulars despite requests to do so,

(v) Verification regarding the annual income of the applicant.

(*c*) 1,360.

(*d*) A person is eligible for grant of pension if, on account o participation in the National Movement, he .—

(1) had been sentenced to imprisonment for not less than three months; or

(2) had been kept under detention (including detention as under-trial prisoner) for not less than three months; or

(3) was killed in action ; or

(4) was sentenced to death: or

(5) died due to police or military firing or lathincharge; or

(6) lost his/her job or means of livelihood or the whole or substantial part of his/her property.

A person satisfying any one of the above canditions should be domiciled in the State of Mysore for a period or not less than five years immediately preceding the date on which he applies for grant of pension.

The wife, husband or minor child of deceased person satisfying the above conditions is also eligible for grant of pension.

The mother of deceased person satisfying the above conditions is also eligible for grant of pension if she has no means of sustenance and has no relative or relatives on whom she could depend for support.

Pension is admissible to an applicant if his/her annual incom from all sources including income from lands granted and othe benefits conferred by the State Government does not exceed Rs. 2,400

ಶ್ರೀ ಕೆ. ಶ್ರೀರಾಮುಲು .—(ಈ) ಪ್ರಶ್ನೆಗೆ ಉತ್ತರವಾಗಿ ಕೊಟ್ಟಿರುವುದನ್ನು ನೋಡಿದರೆ, ಅದರಲ್ಲಿ ಮೂರು ತಿಂಗಳಿಗೆ ಕಡಿಮೆ ಇಲ್ಲಿದಂತೆ ಶಿಕ್ಷೆ ಅನುಭವಿಸಿದ್ದರೆ ಅಂತಹವರಿಗೆ ಈ ರಾಜಕೀಯ ಪರಿಹಾರ ಸಿಗುತ್ತದೆಂದು ಹೇಳಿದ್ದೀರಿ. ಯಾವುದೇ ಒಂದು ರಾಷ್ಟ್ರೀಯ ಹೋರಾಟದ ಪ್ರಾರಂಭದಲ್ಲಿ ಕೆಲವರು ಜೈಲಿಗೆ ಹೋಗುತ್ತಾರೆ, ಇನ್ನು ಕೆಲವರು ಮಧ್ಯೆ ಭಾಗದಲ್ಲಿ ಜೈಲಿಗೆ ಹೋಗುತ್ತಾರೆ, ಮತ್ತೆ ಕೆಲವರು ಅಂತ್ಯ ಭಾಗದಲ್ಲಿ ಜೈಲಿಗೆ ಹೋಗುತ್ತಾರೆ. ಅಂದಮೇಲೆ ಈ ಮೂರು ವರ್ಗದ ಜನರ ಉದ್ದೇಶ ಒಂದೇ ಇದೆ. ಬೇರೆ ಉದ್ದೇಶವೇನೂ ಇಲ್ಲ. ಇದರ ಬಗ್ಗೆ ಸರ್ಕಾರದ ಅಭಿಪ್ರಾಯ ಏನು? ಹೀಗೆ ೩ ತಿಂಗಳ ಒಂದು ಅವಧಿಯನ್ನು ಇಡುವುದು ಸರಿಯಲ್ಲವೆಂದು ನಾನು ಭಾವಿಸುತ್ತೇನೆ.

† ಶ್ರೀ ಆರ್. ಡಿ. ಕಿತ್ತೂರ್ .—ಅದು ಮಾನ್ಯ ಸದಸ್ಯರ ಅಭಿಪ್ರಾಯದ ಮಾತು.

ಶ್ರೀ ಹಂಜಿ ಶಿವಣ್ಣ .—ರಾಜಕೀಯ ಸಂತ್ರಸ್ತರ ರಿಕಾರ್ಡುಗಳನ್ನು ಪರಿಶೀಲನೆಮಾಡುವಾಗ ಹಿಂದೆ ಭೂಮಿ ವಗೈರೆ ಕೊಟ್ಟಿದೆ. ಆದ್ದರಿಂದ ಅಂತಹವರಿಗೆ ವಿಶ್ರಾಂತಿ ವೇತನವನ್ನು ಕೊಡಬಾರದೆಂದೇ ನಾದರೂ ಷರತ್ತು ಇದೆಯೇ?

ಶ್ರೀ ಡಿ. ದೇವರಾಜ್ ಅರಸ್ .—ಸಾಧಾರಣವಾಗಿ ಒಂದು ಸಾರಿ ಭೂಮಿ ಕೊಟ್ಟ ಮೇಲೆ ವಿಶ್ರಾಂತಿ ವೇತನ ಕೊಡುವುದು ಸರಿಯಲ್ಲವೆಂದು ನಾವು ಇಟ್ಟುಕೊಂಡಿರುವ ಕ್ರಮ.

ಶ್ರೀ ಹಂಜಿ ಶಿವಣ್ಣ .—ಹಾಗೆ ಕೊಟ್ಟಿದ್ದರೆ, ಕೆಲವಕ್ಕೆ ಈಗ ನಿಲ್ಲಿಸಿದ್ದೀರಿ. ಅದು ಸರಿಯಲ್ಲ ತಲ್ಲವೇ?

ಶ್ರೀ ಡಿ. ದೇವರಾಜ್ ಅರಸ್ (ಮುಖ್ಯ ಮಂತ್ರಿಗಳು) .—ಕೆಲವು ಸಂದರ್ಭಗಳಲ್ಲಿ ಭೂಮಿ ಒಂದೊಂದು ಸಾರಿ ತೀರಾ ಬಂಜರು ಭೂಮಿ ಕೊಟ್ಟಿರುತ್ತೇವೆ. ಆದರಿಂದ ಏನು ಪ್ರಯೋಜನವಾಗುವುದಿಲ್ಲ. ಹೆಸರಿಗೆ ಕೊಟ್ಟಿದ್ದೇವೆಂದು ಅವರು ಇರುತ್ತಾರೆ. ಅಂತಹ ಸಂದರ್ಭ ನೋಡಿ ಅವರಿಗೆ ಜೀವನ ನಡೆಸುವುದಕ್ಕೆ ಆಗುವುದಿಲ್ಲವೆಂದು ತಿಳಿದುಕೊಂಡು ಅವರಿಗೆ ವಿಶ್ರಾಂತಿ ವೇತನ ಕೊಟ್ಟಿರಬಹುದು. ಇನ್ನು ಕೆಲವರಿಗೆ ಒಳ್ಳೆಯ ಕಡೆ ದೊಡ್ಡದಾಗಿರುವ ಜಮೀನು ಸಿಕ್ಕಿರುತ್ತದೆ. ಮತ್ತೆ ಕೆಲವರಿಗೆ ಹುಲ್ಲು ಸಹ ಬೆಳೆಯುವುದಿಲ್ಲ ಅಂತಹ ಕಡೆ ಜಮೀನು ಕೊಟ್ಟಿರಬಹುದು.

ಶ್ರೀ ಎಂ. ಎಸ್. ಕೃಷ್ಣನ್ .—ಸ್ಟೇಟ್ಸ್ ಪೀಪಲ್ಸ್ ಸ್ಟ್ರಗಲ್‌ನಲ್ಲಿ ಯಾರು ಪಾರ್ಟಿಸಿಪೇಟ್ ಮಾಡುತ್ತಾರೋ ಅಂತಹವರನ್ನು ನ್ಯಾಷನಲ್ ಮೂವೆಂಟ್‌ನಲ್ಲಿಯೂ ಪಾರ್ಟಿಸಿಪೇಟ್ ಆಗಿರುವವರು ಎಂದು ಕನ್‌ಸಿಡರ್ ಮಾಡುತ್ತೀರಾ?

ಶ್ರೀ ಡಿ. ದೇವರಾಜ್ ಅರಸ್ .—ಅದರಲ್ಲಿ ಡಿಸ್ಕ್ರಿಂಕ್ಷನ್ ಏನೂ ಇಲ್ಲ.

ಒಬ್ಬ ಸದಸ್ಯರು .—ಈಗ ನ್ಯಾಷನಲ್ ಮೂವ್‌ಮೆಂಟಿನಲ್ಲಿ ಹೆಚ್ಚಿಗೆ ವಿದ್ಯಾರ್ಥಿಗಳು ಭಾಗವಹಿಸಿ, ಅದರಲ್ಲಿಯೂ ೧೮ ವರ್ಷಗಳಿಗಿಂತ ಕಡಿಮೆ ಇರುವವರಿಗೆ ಲಾಠಿ ಚಾರ್ಜ್ ಆಗಿ ಅವರನ್ನು ರಿಮ್ಯಾಂಡ್ ಹೋಮಿಗೆ ಕಳುಹಿಸಿದ್ದಾರೆ. ಅವರಿಗೆ ಈ ಸೌಕರ್ಯ ಏಕೆ ಸಿಗಬಾರದು?

ಶ್ರೀ ಡಿ. ದೇವರಾಜ್ ಅರಸ್ .—೧೮ ವರ್ಷಗಳಿಗಿಂತ ಕಡಿಮೆ ಇರುವವರು ರಿಮ್ಯಾಂಡ್ ಹೋಂ ನಲ್ಲಿದ್ದರೆ ಅದರಿಗೂ ಈ ಸೌಕರ್ಯ ಕೊಡಬೇಕೆಂದು ಹೇಳುತ್ತೀರಾ?

ಒಬ್ಬ ಸದಸ್ಯರು .—ಹೌದು ಅದನ್ನು ಸರ್ಕಾರ ಪರಿಶೀಲಿಸಬೇಕು.

ಬಬ್ಬ ಮಾನ್ಯ ಸದಸ್ಯರು .—ಸ್ವಾತಂತ್ರ್ಯ ಚಳುವಳಿಯಲ್ಲಿ ಹೆಣ್ಣು ಮಕ್ಕಳು ಭಾಗವಹಿಸಿದ್ದವರಲ್ಲಿ ಕೆಲವರಿಗೆ ಎರಡು ತಿಂಗಳು ಶಿಕ್ಷೆಯಾಗಿದೆ. ೩ ತಿಂಗಳು ಶಿಕ್ಷೆಯಾಗಿಲ್ಲ. ಅಂದ ಮೇಲೆ ಕೇವಲ ಉಳಿದ ಒಂದು ತಿಂಗಳಿಗೆ ಏನು ಪೇಮಾಡುತ್ತಿರಾ?

ಶ್ರೀ ಡಿ· ದೇವರಾಜ್ ಅರಸ್.—ಕೆಲವು ವಿಶೇಷ ಸಂದರ್ಭಗಳಲ್ಲಿ ನಾರ್ಮಲ್ಲಾಗಿ ೩ ತಿಂಗಳುಗಳ ಎಂಬುದಾಗಿಟ್ಟಿದ್ದರೂ ಮಾನ್ಯ ಸದಸ್ಯರು ಹೇಳಿದ ಹಾಗೆ ಅದನ್ನೂ ಕೂಡ ಒವರ್‌ಲುಕ್ ಮಾಡಿ ಆ ರೀತಿ ಕೊಟ್ಟಿದ್ದೂ ಉಂಟು.

SRI J. P. SARVESH.—If any of the applicant has not fulfilled any of the conditions, may I know whether the Government has thought of informing him that those conditions are not fulfilled ?

SRI D. DEVARAJ URS.—In such cases where Government have not come to the decision to give pension, normally they ought to be informed. If there are instances where they have not been informed, I will see that they are duly informed of the decision.

ಶ್ರೀ ಎಚ್. ಎಸ್. ಸಿದ್ದಪ್ಪ.—ತಾವು ಈ ಫ್ರೀಡಂ ಸ್ಟ್ರಗಲಿನಲ್ಲಿ ನೊಂದವರಿಗೆ ಜಮೀನು ಕೊಟ್ಟಿದ್ದರೂ ಕೆಲವರು ಅನಿವಾರ್ಯವಾದ ಸಂದರ್ಭಗಳಲ್ಲಿ ಜೀವನ ನಡೆಯಲ್ಲಿಲ್ಲವೆಂದರೆ ಅದನ್ನೂ ಮಾರಿಕೊಂಡಿದ್ದಾರೆ ಅಂತಹವರಿಗೆ ಸ್ಪೆಷಲ್ಲಾಗಿ ಕನ್‌ಸಿಡರ್ ಮಾಡಿ ಪೆನ್‌ಷನ್ ಕೊಡುತ್ತೀರಾ ?

ಶ್ರೀ ಡಿ. ದೇವರಾಜ್ ಅರಸ್.—ಅಂಥಾದ್ದು ಇದ್ದರೆ ವಿಶೇಷ ಸಂದರ್ಭಗಳಲ್ಲಿ ಕನ್‌ಸಿಡರ್ ಮಾಡೋಣ.

SRI D. B KALMANKAR.—May I know what is the definition of "national movement" and whether "national movement" also includes movement which took place in Hyderabad after the liberation of Hyderabad State and other such States ?

SRI D. DEVARAJ URS.—I have already stated that is not differentiated.

ಶ್ರೀ ಕೆ. ಶ್ರೀರಾಮುಲು.—ಮೂರು ತಿಂಗಳು ಶಿಕ್ಷೆ ಮತ್ತು ವರಮಾನದ ಆಧಾರದ ಮೇಲೆ ವಿಶ್ರಾಂತಿವೇತನ ಕೊಡತಕ್ಕದ್ದನ್ನು ತೆಗೆದು ಒಂದು ದಿನ ಜೈಲಿಗೆ ಹೋಗಿದ್ದರೂ ಅಂತಹವರಿಗೂ ಕೊಡ ಬೇಕು, ಅದನ್ನು ಆಗಸ್ಟ್ ೧೫ನೇ ತಾರೀಖಿನೊಳಗೆ ಕೊಡುವುದಕ್ಕಾಗುವುದಿಲ್ಲವೇ ?

ಶ್ರೀ ಡಿ. ದೇವರಾಜ್ ಅರಸ್.—ಹಾಗೆ ಕೊಡುವುದಕ್ಕಾಗುವುದಿಲ್ಲ. ಅವರು ಶಿಕ್ಷೆ ಅನುಭವಿಸಿದ ಲೆಕ್ಕ ಎಷ್ಟಿದೆ ಎಂಬುದನ್ನು ತಿಳಿಯಬೇಕು ಆದರೆ ಎಲ್ಲರಿಗೂ ಆ ರೀತಿ ಕೊಡುವುದಕ್ಕಾಗುವುದಿಲ್ಲ.